ಳಿ ಸಾವಿರ ರೂಪಾಯಿಗಳಂತೆ ಕೊಟ್ಟಿದ್ದಾರೆ. ಒಂದೇ ಭಾಗದಲ್ಲಿರತಕ್ಕ ಜಮೀನಿಗೆ ಎರಡು ರೀತಿಯ ಪರಿಹಾರ ಬರುವುದಿಲ್ಲ, ಅದನ್ನು ಸರಿಪಡಿಸಿ ಎಂದು ನಾನು ಹೇಳಿದ್ದೇನೆ. ಜೊತೆಗೆ ಮನೆ ಕಟ್ಟಿ ಕೊಡುವ ಬಗ್ಗೆ ಹೇಳಬೇಕಾದರೆ, ಮಾಗಡಿಯಲ್ಲಿ ನಾನು ಸಹ ಮುನಿಸಿಪಲ್ ಅಧ್ಯಕ್ಷನಾಗಿದ್ದೆ. ಆ ಚಾಗದಲ್ಲಿ ಬಡವರಿಗೆ ಮನೆ ಕಟ್ಟಿಕೊಡುವಂತಹ ಕಾರ್ಯಕ್ರಮಗಳಿವೆ. ಇಲ್ಲಿ ಇಲಾಖೆ ಬೇರೆ ಇರಬಹುದು. ಆದರೂ ಸಹ ಮತ್ತೊಂದು ಇಲಾಖೆಯ ಜೊತೆಗೆ ಸಹಕರಿಸಿ ಅವರನ್ನು ಕೇಳಿಕೊಂಡು ಈ ಜಮೀನನ್ನು ತೆಗೆದುಕೊಂಡು ಜನರಿಗೆ ಮನೆ ಕಟ್ಟಿಸಿಕೊಡಲು ಸಹಾಯ ಮಾಡಿಕೊಡಬೇಕಾದುದು ಇಲಾಖೆಯ ಕರ್ತವ್ಯ ಅಲ್ಲದಿದ್ದರೂ ಸಹ ಇದು ಸರ್ಕಾರದ ಕರ್ತವ್ಯ. ಆದ್ದರಿಂದ ಸರ್ಕಾರದವರು ಇದನ್ನು ಮಾಡಿಕೊಡಬೇಕೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಭೂ ಪರಿಹಾರ ಕೊಡುವುದರಲ್ಲಿ ಆಗಿರತಕ್ಕ ವ್ಯತ್ಯಾಸವನ್ನು ಈಗಾಗಲೇ ಸರಿಪಡಿಸಿದ್ದೇವೆ. ಎರಡು ಸಾವಿರ ಒಂದು ಊರಿಗೆ ಕೊಡತಕ್ಕಂಥದ್ದು ಮತ್ತೊಂದು ಊರಿಗೆ ನಾಲ್ಕು ಸಾವಿರ ಕೊಡತಕ್ಕದ್ದು ಏನು ಇದೆ, ಅದು ಆಗಬಾರದು ಎಂದು ಎಲ್ಲರಿಗೂ ನಾಲ್ಕು ಸಾವಿರ ಕೊಡಬೇಕು ಎಂಬ ನಿರ್ಣಯವನ್ನು ಅವರ ಸಮ್ಮುಖದಲ್ಲಿ ನಡೆದಂತಹ ಮೀಟಿಂಗ್‌ನಲ್ಲಿ ತೀರ್ಮಾನವನ್ನು ತೆಗೆದುಕೊಂಡಿದ್ದೇನೆ. ಅದರಂತೆ ಈಗಾಗಲೇ ಕೆಲವರಿಗೆ ಕೊಟ್ಟಿದ್ದೇವೆ, ಈ ಕಾರ್ಯ ಪ್ರಗತಿಯಲ್ಲಿದೆ ಎನ್ನುವ ವಿಚಾರವನ್ನು ಹೇಳುತ್ತೇನೆ. ಮತ್ತೊಂದು ಮಾತು ಹೇಳಿದ್ದಾರೆ. ಬೇರೆ ಇಲಾಖೆ ಆದರೂ ಕೂಡ ಇದು ಸರ್ಕಾರದ್ದೇ ಆದ್ದರಿಂದ ಅದನ್ನೂ ಕೂಡ ಖತಕ್ಕೆ ಮಾಡಿಸಬಾರದು ಎಂದು ಹೇಳಿದ್ದಾರೆ. ಆ ದಿಸೆಯಲ್ಲಿ ನಾನು ಪ್ರಯತ್ನ ಮಾಡುತ್ತೇನೆ.

(೨) ೧೯೯೦–೯೧ನೇ ಸಾಲಿಗೆ ಪ್ರಥಮ ವರ್ಷದ ಪದವಿ ತರಗತಿಗಳಿಗೆ ಪ್ರವೇಶ ನೀಡಬಾರದೆಂದು ಮೂಡಿಗೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಿಗೆ ಕುವೆಂಪು ವಿಶ್ವವಿದ್ಯಾನಿಲಯದ ನಿರ್ದೇಶನ

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ, ೧೯೯೦–೯೧ನೇ ಸಾಲಿಗೆ ಪ್ರಥಮ ವರ್ಷದ ಪದವಿ ತರಗತಿಗಳಿಗೆ ಪ್ರವೇಶ ನೀಡಬಾರದೆಂದು ಮೂಡಿಗೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಿಗೆ ಕುವೆಂಪು ವಿಶ್ವವಿದ್ಯಾನಿಲಯದ ನಿರ್ದೇಶನದ ಬಗ್ಗೆ ಶಿಕ್ಷಣ, ಯುವಜನ ಸೇವೆ, ಕ್ರೀಡೆಗಳು, ಕನ್ನಡ ಮತ್ತು ಸಂಸ್ಕೃತಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ (ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆಗಳು ಕನ್ನಡ ಮತ್ತು ಸಂಸ್ಕೃತಿ ಸಚಿವರು).—ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತಿದ್ದೇನೆ.

೧೯೯೦–೯೧ನೇ ಸಾಲಿಗೆ ಪ್ರಥಮ ವರ್ಷದ ಪದವಿ ತರಗತಿಗಳಿಗೆ ಪ್ರವೇಶ ನೀಡಬಾರದೆಂದು ಮೂಡಿಗೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಿಗೆ ಕುವೆಂಪು ವಿಶ್ವವಿದ್ಯಾನಿಲಯವು ನಿರ್ದೇಶನ ನೀಡಿರುವ ಬಗ್ಗೆ ಸರ್ಕಾರಕ್ಕೆ ಅಧಿಕೃತವಾಗಿ ಸದರಿ ವಿಶ್ವವಿದ್ಯಾನಿಲಯದಿಂದಾಗಲೀ ಅಥವಾ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಂದಾಗಲೀ ಮಾಹಿತಿಗಳು ಬಂದಿರುವುದಿಲ್ಲ.

ಆದರೆ, ಈ ಬಗ್ಗೆ ದಿನಾಂಕ ೨೩ನೇ ಜೂನ್ ೧೯೯೦ ರಂದು ನಡೆದ ಕುವೆಂಪು ವಿಶ್ವವಿದ್ಯಾನಿಲಯದ ೬ನೆಯ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ, ಮೂಡಿಗೆರೆಯಲ್ಲಿರುವ ಪ್ರಥಮ ದರ್ಜೆ ಕಾಲೇಜಿಗೆ ಪ್ರಥಮ ಡಿಗ್ರಿ ತರಗತಿಗೆ ಸಂಯೋಜನೆ ನೀಡಬಾರದೆಂದು ಸಮಿತಿಯು ವರದಿ ಸಲ್ಲಿಸಿರುವ ಪ್ರಯುಕ್ತ, ಸದರಿ ಕಾಲೇಜಿಗೆ ಪತ್ರ ಬರೆದು ವಿಶ್ವವಿದ್ಯಾನಿಲಯದ ಆದೇಶದಂತೆ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬಾರದೆಂದು, ಒಂದು ವೇಳೆ ಈಗಾಗಲೇ ಪ್ರವೇಶ ನೀಡಿ ಸೇರಿಸಿಕೊಂಡಿದ್ದಲ್ಲಿ ವಿದ್ಯಾರ್ಥಿಗಳನ್ನು ಬೇರೆ ಬೇರೆ ಕಾಲೇಜುಗಳಿಗೆ ಕಳುಹಿಸಿಕೊಡಬೇಕೆಂದು ಸೂಚಿಸಿ ಪತ್ರ ಬರೆಯಬೇಕೆಂದು ಸಭೆಯು ಅಭಿಪ್ರಾಯ ಪಡೆಯಿತೆಂದು ತಿಳಿದು ಬಂದಿದೆ.

ಈ ವಿಷಯದ ಬಗ್ಗೆ ಪೂರ್ಣ ವರದಿಯನ್ನು ಸಂಬಂಧಪಟ್ಟ ವಿಶ್ವವಿದ್ಯಾನಿಲಯ ಹಾಗೂ ಕಾಲೇಜಿನಿಂದ ತರಿಸಿಕೊಂಡು ನಿಯಮಾನುಸಾರ ಪರಿಶೀಲಿಸಲಾಗುವುದು.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ, ಆ ಪತ್ರದ ನಕಲು ನನ್ನ ಹತ್ತಿರ ಇದೆ. ನಾನು ಅದನ್ನು ಉಲ್ಲೇಖ ಮಾಡುವುದಕ್ಕೆ ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ. ೧೯೯೦–೯೧ನೇ ಸಾಲಿಗೆ ಪ್ರಥಮ ಪದವಿ ತರಗತಿ ಪ್ರವೇಶ ನಿರಾಕರಿಸುವ ಬಗ್ಗೆ "ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿ

ದಂತೆ ಉಲ್ಲೇಖ (೧) ರಲ್ಲಿ ಸೂಚಿಸಿರುವ ಸ್ಥಳೀಯ ವಿಚಾರಣಾ ಸಮಿತಿಯು ತನ್ನ ವರದಿಯಲ್ಲಿ ಅಗತ್ಯ ಅನುಕೂಲತೆಗಳನ್ನು ಪೂರೈಸುವ ತನಕ ೧೯೯೦–೯೧ನೇ ಸಾಲಿಗೆ ಪ್ರಥಮ ಬಿ.ಎ., ಬಿ.ಕಾಂ. ತರಗತಿಗಳಿಗೆ ವಿದ್ಯಾರ್ಥಿಗಳ ಪ್ರವೇಶವನ್ನು ರದ್ದುಪಡಿಸಬೇಕು ಎಂದು ಶಿಫಾರಸ್ಸು ಮಾಡಿರುವ ಪ್ರಕಾರ ದಿನಾಂಕ ೨೩ನೇ ಜೂನ್ ೧೯೯೦ ರಂದು ಸಿಂಡಿಕೇಟ್ ಸಭೆಯು ಸದರಿ ವರದಿಯನ್ನು ಅನುಮೋದಿಸಿ ೧೯೯೦–೯೧ನೇ ಸಾಲಿನ ಪ್ರಥಮ ವರ್ಷ ಪದವಿ ತರಗತಿಗಳಿಗೆ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬಾರದು ಎಂದು ತಿಳಿಸಲು ನಾನು ನಿರ್ದೇಶಿತನಾಗಿದ್ದೇನೆ. ಒಂದು ವೇಳೆ ಈಗಾಗಲೇ ಪ್ರವೇಶ ನೀಡಿದ್ದರೆ ವಿದ್ಯಾರ್ಥಿಗಳನ್ನು ಬೇರೆ ಕಾಲೇಜಿಗೆ ಕಳಿಸುವ ವ್ಯವಸ್ಥೆ ಮಾಡಬೇಕು ಎಂದು ತಿಳಿಸಲೂ ಸಹ ನಾನು ನಿರ್ದೇಶಿತನಾಗಿದ್ದೇನೆ. ನಾನು ಮಾನ್ಯ ಮಂತ್ರಿಗಳ ಹೇಳಿಕೆಯ ಬಗ್ಗೆ ಎರಡು ಮೂರು ವಿಷಯ ಪ್ರಸ್ತಾಪ ಮಾಡಲು ಬಯಸುತ್ತೇನೆ. ಸಿಂಡಿಕೇಟ್ ೨೩ನೇ ಜೂನ್ ೧೯೯೦ಕ್ಕೆ ಸಭೆ ಸೇರಿತು. ೩ನೇ ಜುಲೈ ೧೯೯೦ಕ್ಕೆ ಅಲ್ಲಿಂದ ಈ ಆಜ್ಞೆ ಹೊರಟಿತು. ೧ನೇ ಜುಲೈ ೧೯೯೦ ರಂದು ಪ್ರಿನ್ಸಿಪಾಲರಿಗೆ ತಲುಪಬೇಕಾಗುತ್ತದೆ. ಪ್ರವೇಶ ಪ್ರಾರಂಭ ಆಗುವುದು ೧ನೇ ಜುಲೈ ೧೯೯೦ಕ್ಕೆ. ೧ನೇ ಜುಲೈ ೧೯೯೦ಕ್ಕಿಂತ ಮುಂಚೆ ಏನಾದರೂ ನಿರ್ಣಯ ಮಾಡಿದರೆ ಆ ಮಾತು ಬೇರೆ. ಇವರೇ ತನ್ನ ನಿರ್ಣಯವನ್ನು ಕಳಿಸುವುದಕ್ಕೆ ಮೂರನೆಯ ತಾರೀಖಿನವರೆಗೆ ಸಮಯ ತೆಗೆದುಕೊಂಡಿದ್ದಾರೆ. ಹೀಗೆ ಪ್ರಥಮ ದರ್ಜೆ ಕಾಲೇಜು ಪ್ರಾರಂಭ ಆದ ಮೇಲೆ ಅಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿಕೊಂಡ ಮೇಲೆ ಈ ರೀತಿ ನಿರ್ಣಯವನ್ನು ಕಮ್ಯುನಿಕೇಟ್ ಮಾಡತಕ್ಕಂಥಾದ್ದು ಸರಿಯೇ? ಮಾನ್ಯ ಶಿಕ್ಷಣ ಸಚಿವರು ಈ ಕ್ಷೇತ್ರದಲ್ಲಿ ಎರಡು ಬಾರಿ ಪ್ರತಿನಿಧಿಸಿದ್ದವರು. ಅದು ನನ್ನ ನೆನಪಿನಲ್ಲಿದೆ, ಅಚ್ಚ ಹಸುರಾಗಿ. ಎಂಟು ವರ್ಷಗಳಿಂದ ಈ ಕಾಲೇಜು ನಡೆಯುತ್ತಾ ಇದೆ. ಅಗತ್ಯ ಅನುಕೂಲತೆಗಳನ್ನು ಯಾರು ಪೂರೈಸಬೇಕಾಗಿತ್ತು? ಇದು ಎತ್ತು ಮಾಡಿದ ಅಪರಾಧಕ್ಕೆ ಎಮ್ಮೆಗೆ ಬರೆ ಹಾಕಿದರು ಎಂಬಂತಾಗಿದೆ. ಸರ್ಕಾರ ಇದನ್ನು ಪೂರೈಸದೇ ಇದ್ದ ಅಪರಾಧಕ್ಕಾಗಿ ವಿದ್ಯಾರ್ಥಿಗಳಿಗೆ, ಇಡೀ ತಾಲ್ಲೂಕಿನಲ್ಲಿರತಕ್ಕದ್ದು ಇದು ಒಂದೇ ಕಾಲೇಜು ಅದನ್ನು ಕೂಡ ಮುಚ್ಚತಕ್ಕ ನಿರ್ಣಯ ಸಿಂಡಿಕೇಟ್‌ನವರು ಮಾಡಿದರೆ ಸರ್ಕಾರಕ್ಕೆ ಸಿಂಡಿಕೇಟ್‌ನವರ ತೀರ್ಮಾನವನ್ನು ಒದಿಗೆ ಸರಿಸಿ ಕಾಲೇಜನ್ನು ನಡೆಸಿಕೊಂಡು ಹೋಗತಕ್ಕ ಅಧಿಕಾರ ತಮಗೆ ಇದೆ. ಆ ಅಧಿಕಾರವನ್ನು ಬಳಸಿ ಆ ಕಾಲೇಜು ಮುಂದುವರಿಯುವಂತೆ ಆಜ್ಞೆ ಹೊರಡಿಸಿ. ಆಮೇಲೆ ಸಿಂಡಿಕೇಟ್‌ನವರು ೨೩ನೇ ತಾರೀಖು ನಿರ್ಣಯ ಮಾಡಿ ಮೂರನೇ ತಾರೀಖು ಕಮ್ಯುನಿಕೇಶನ್ ಹೊರಡಿಸಿ, ೭ನೇ ತಾರೀಖಿನ ತನಕ ಪ್ರವೇಶ ಆಗಿದ್ದರೆ ಅನುಕೂಲತೆಗಳು ಇಲ್ಲದೇ ಇದ್ದರೆ ಅದನ್ನು ಸರ್ಕಾರ ಪೂರೈಸಿದೆ. ನಿಮಗೆ ಈ ಕೆಲಸ ಬೇಡ ಎಂದು ದಯವಿಟ್ಟು ಆದೇಶ ಕೊಡುತ್ತೀರಾ?

ಶ್ರೀ ಕೆ. ಹೆಚ್. ರಂಗನಾಥ್. ವಿಶ್ವವಿದ್ಯಾನಿಲಯಕ್ಕೆ ಏನೇನು ಅಲ್ಲಿ ಅನುಕೂಲಗಳು ಇದೆ. ಅನುಕೂಲ ಇಲ್ಲ ಎಂದು ಹೇಳತಕ್ಕಷ್ಟು ಅಷ್ಟೇ ಅಧಿಕಾರ ಇದೆಯೇ ವಿನಹ ಕಾಲೇಜುಗಳನ್ನು ನೀವು ಕ್ಲೋಸ್ ಮಾಡಿ ಎಂದು ಹೇಳತಕ್ಕಂಥ ಅಧಿಕಾರ ಇಲ್ಲ. ಈ ಅಧಿಕಾರ ಇರತಕ್ಕದ್ದು ಸರ್ಕಾರಕ್ಕೆ. ನಾನು ಈಗಾಗಲೇ ಹೇಳಿದ್ದೇನೆ. ಸರ್ಕಾರದ ಗಮನಕ್ಕೆ ಬಂದಿಲ್ಲ, ಡೈರೆಕ್ಟರೇಟ್ ಆಫ್ ಕೊಲಿಜಿಯೇಟ್ ಎಜುಕೇಶನ್‌ಗೂ ಬಂದಿಲ್ಲ. ನಿನ್ನೆಯ ದಿವಸ ಅವರು ನನ್ನನ್ನು ಭೇಟಿ ಆಗಿದ್ದರು. ಮಾನ್ಯ ಸದಸ್ಯರಾದ ಮೊಟಮ್ಮನವರು ಈ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈಗ ಮಕ್ಕಳನ್ನು ಅಲ್ಲಿಗೆ ಸೇರಿಸುವುದನ್ನು ನಾವು ನಿಲ್ಲಿಸಿಲ್ಲ. ಡೈರೆಕ್ಟೋರೇಟ್ ಆಫ್ ಕೊಲಿಜಿಯೇಟ್ ಎಜುಕೇಶನ್ ನಿಲ್ಲಿಸಿಲ್ಲ. ಸರ್ಕಾರದಿಂದ ನಿಲ್ಲಿಸಿಲ್ಲ. ವಿಶ್ವವಿದ್ಯಾನಿಲಯದಿಂದ ಆದೇಶ ಬಂದಿರಬಹುದು. ಒಂದೊಂದು ಸಾರಿ ಅವರ ಸ್ಟಾಚ್ಯೂಟ್ಸ್ ಏನು ಇದೆ, ಅವರ ಪ್ರಕಾರ ಯಾವ್ಯಾವ ಕಾಲೇಜುಗಳಲ್ಲಿ ಏನೇನು ಅನುಕೂಲ ಇರಬೇಕು, ಆ ಅನುಕೂಲಗಳು ಇಲ್ಲ. ಅನುಕೂಲಗಳು ಇಲ್ಲದೇ ಹೋದರೆ ಯಾವ್ಯಾವುದಕ್ಕೆ ಅವರು ಅನುಮತಿಯನ್ನು ಕೊಟ್ಟಿದ್ದಾರೆ, ಅದನ್ನು ವಾಪಸ್ ತೆಗೆದುಕೊಳ್ಳುತ್ತೇನೆ ಎಂದು ಹೇಳತಕ್ಕದ್ದು.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ಇದನ್ನು ಕಾಂಗ್ರೆಸ್ ಕಛೇರಿ ಮಾಡಿಕೊಂಡರೆ ಹೇಗೆ? ಉತ್ತರ ಹೇಳುವಾಗ ಸೀರಿಯಸ್ ಆಗಿ ಇರಬೇಕು.

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ್.—ಆದ್ದರಿಂದ ವಿಶ್ವವಿದ್ಯಾನಿಲಯಕೊಟ್ಟಿದೆ ಎಂದು ಹೇಳಿದ್ದಾರೆ. ಅದನ್ನು ತಕ್ಷಣ ನೋಡಿಸುತ್ತೇನೆ. ಕಾಲೇಜಿಗೆ ಮಕ್ಕಳನ್ನು ಸೇರಿಸುವುದಕ್ಕೆ ನಾವು ಆಜ್ಞೆಯನ್ನು ಕೊಡುತ್ತೇವೆ. ಅದನ್ನು ನಿಲ್ಲಿಸುವುದಿಲ್ಲ. ಅಲ್ಲಿ ಏನು ಅನುಕೂಲಗಳನ್ನು ಮಾಡಬೇಕು. ಏನು

ಅನುಕೂಲಗಳು ಇಲ್ಲ. ಏನೇನು ಅನಾನುಕೂಲಗಳಿವೆ ಎನ್ನುವ ವರದಿಯನ್ನು ತರಿಸಿಕೊಂಡು ನೋಡುತ್ತೇವೆ. ವಿಶ್ವವಿದ್ಯಾನಿಲಯದ ಆದೇಶ ಪ್ರಕಾರ ಅಲ್ಲಿ ಆ ಕಾಲೇಜು ಚೆನ್ನಾಗಿ ನಡೆಯುವುದಕ್ಕೆ ಸೂಕ್ತ ಅನುಕೂಲ ಮತ್ತು ವ್ಯವಸ್ಥೆ ಮಾಡುತ್ತೇವೆ.

ಶ್ರೀ ಡಿ ಬಿ. ಚಂದ್ರೇಗೌಡ:—ನನಗೆ ಹೊಸ ವಿಚಾರ ಹೇಳಿದ್ದಾರೆ. ಅವರು ವಸ್ತುಸ್ಥಿತಿಯನ್ನು ಹೇಳಿದ್ದಾರೆ. ಆದರೆ ಈ ವಿಶ್ವವಿದ್ಯಾನಿಲಯದ ವ್ಯಾಪ್ತಿ ಎಷ್ಟು? ಸರ್ಕಾರದ ವ್ಯಾಪ್ತಿ ಎಷ್ಟು? ಆದರೆ ಇಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವಾದೆಂದು ನಿರ್ದೇಶಿತನಾಗಿದ್ದೇನೆಂದು ಏನು ಹೇಳಿದ್ದಾರೆ ಇದನ್ನು ಪುನಃ ಬೇರೆ ಯಾವ ವಿಶ್ವವಿದ್ಯಾನಿಲಯವೂ ಮಾಡದ ಹಾಗೆ ದಯಮಾಡಿ ತಿಳಿಸಬೇಕು.

ಶ್ರೀ ಕೆ. ಹೆಚ್. ರಂಗನಾಥ್:—ಈ ವೇದಿಕೆಯಿಂದ ಕಠಿಣವಾಗಿ ಮಾತನಾಡಬಾರದು ಎಂದು ಹೇಳಿ ಸ್ವಲ್ಪ ಸಂಯಮದಿಂದ ಹೇಳಿದ್ದೇನೆ ಅಷ್ಟೆ. ಅಷ್ಟು ಅಧಿಕಾರ ಅವರಿಗೆ ಇಲ್ಲ. ಒಂದೊಂದು ಸಾರಿ ಮಾಡುತ್ತಾರೆ, ಈಗ ಸ್ವಾಯತ್ತತೆ ಕೊಟ್ಟಿದ್ದೇವೆಂದು ಹೇಳಿ, ನಾವು ಅವರಿಗೆ ಆಟೊನಮಿ ಬೇಕೆಂದು ಹೇಳಿ, ಬಹಳ ಪ್ರೋತ್ಸಾಹ ಕೊಡುವುದರಿಂದ, ಸ್ವಲ್ಪ ಈ ತರಹ ಮಾಡುತ್ತಾರೆ. ಈ ವಿಶ್ವವಿದ್ಯಾನಿಲಯ ದವರು ಕೊಟ್ಟಿರುವ ಹಣ ಖರ್ಚು ಮಾಡಿ ಇನ್ನೂ ಸರಿಯಾಗಿ ಬಳಸತಕ್ಕ ಕೆಲಸವನ್ನು ಮಾಡುತ್ತಿಲ್ಲ, ಅದನ್ನು ಬಿಟ್ಟು ಇಂಥಾದ್ದು ಮಾಡುತ್ತಾರೆ.. ಈ ನಮ್ಮ ಕುವೆಂಪು ವಿಶ್ವವಿದ್ಯಾನಿಲಯ.

ಭೀಮಣ್ಣ:—ಬೆಳಗಾಂ ಪುರಸಭೆಯವರು ಮಾಡಿದ ಹಾಗೆ.

ಶ್ರೀ ಕೆ. ಹೆಚ್. ರಂಗನಾಥ್:—ನಾವು ಕೊಟ್ಟಿರುವ ಹಣ ಖರ್ಚು ಮಾಡಿಲ್ಲ. ಅದನ್ನು ವ್ಯವಸ್ಥಿತವಾಗಿ ಬಳಸಲಿಕ್ಕೆ ಪ್ರಯತ್ನಪಟ್ಟಿಲ್ಲ. ಇವೊತ್ತು ಈ ಕೆಲಸ ಆಗಿದೆ ಆದ್ದರಿಂದ...

ಶ್ರೀಮತಿ ಮೋಟಮ್ಮ:—ಅಧ್ಯಕ್ಷರೆ, ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿರುವುದರಿಂದ ಒಂದೆರಡು ಮಾತುಗಳನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ಈ ಕಾಲೇಜು ನಮ್ಮೆಲ್ಲರ ಪ್ರಯತ್ನದಿಂದ ಪ್ರಾರಂಭ ಆಗಿದೆ. ಮೊದಲು ಮಲೆನಾಡಿನ ಮಕ್ಕಳು ಫರ್ಸ್ಟ್‌ಗ್ರೇಡ್ ಡಿಗ್ರಿಗೆ ಹೋಗಬೇಕಾದರೆ, ಶಿವಮೊಗ್ಗ, ಹಾಸನ, ಚಿಕ್ಕಮಗಳೂರಿಗೆ ಹೋಗಬೇಕಾಗಿತ್ತು. ಇಲ್ಲ ಅಂದರೆ ಬೆಂಗಳೂರಿಗೆ ಬರಬೇಕಾಗಿತ್ತು. ಮಲೆನಾಡಿಗೆ ಒಂದು ಕಾಲೇಜು ಬೇಕು ಎಂದು ಹೇಳಿ ಬಹಳ ಕಷ್ಟಪಟ್ಟು ಮಂಜೂರು ಮಾಡಿಸಿ ಏಳು ವರ್ಷವಾಗಿದೆ. ಆದರೆ ಯೂನಿವರ್ಸಿಟಿಯಿಂದಾಗಲಿ, ಸರ್ಕಾರದಿಂದಾಗಲಿ, ಯಾವುದೇ ಸವಲತ್ತು ಕೊಡದೆ, ಅದಕ್ಕೆ ಅನುಕೂಲಗಳು ಯಾವುದೇ ಇಲ್ಲದೇ ಇರುವುದರಿಂದ, ಆ ಕಾಲೇಜನ್ನು ಮುಚ್ಚಲಾಗುತ್ತದೆ, ಅಥವಾ ಮುಂದೆ ಪ್ರವೇಶ ಕೊಡುವುದಿಲ್ಲ ಎಂದು ಹೇಳುವುದರಲ್ಲಿ ಅರ್ಥ ಇದೆಯೇ? ಹೀಗಾದರೆ ನಿಜವಾಗಲೂ ಗ್ರಾಮಾಂತರ ಪ್ರದೇಶವಲ್ಲಿರತಕ್ಕ ವಿದ್ಯಾರ್ಥಿಗೆ ನೀವು ಪ್ರೋತ್ಸಾಹ ಕೊಟ್ಟಂತಾಗುತ್ತದೆಯೇ? ಮಾನ್ಯ ಮಂತ್ರಿಗಳಲ್ಲಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ಕುಲಪತಿಗಳ ಬಗ್ಗೆ ತಾವು ವಿಚಾರ ಮಾಡಬೇಕು. ಮೂಡಿಗೆರೆ ಫರ್ಸ್ಟ್‌ಗ್ರೇಡ್ ಕಾಲೇಜು ಪ್ರಾರಂಭವಾಗಿ ಏಳು ವರ್ಷಗಳಾಯಿತು, ಆವರಿಗೆ ದೊರೆತಂಥ ಗ್ರಾಂಟ್ಸ್‌ನಲ್ಲಿ ಯಾವ ಒಂದು ಸವಲತ್ತು ಈ ಕಾಲೇಜಿಗೆ ಒದಗಿಸಿದ್ದಾರೆ ಎನ್ನುವುದನ್ನು ತಾವು ಪರಿಶೀಲನೆ ಮಾಡಬೇಕು. ಈ ಕಾಲೇಜು ನಡೆಸಬಾರದು ಎಂದು ಹೇಳಲಿಕ್ಕೆ ಅವರಿಗೆ ಅಧಿಕಾರ ಏನಿದೆ ಎನ್ನುವುದನ್ನು ತಾವು ವಿಚಾರ ಮಾಡಬೇಕೆಂದು ತಮ್ಮ ಮೂಲಕ ನಾನು ಪ್ರಾರ್ಥಿಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್:—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಆ ವಿಶ್ವವಿದ್ಯಾನಿಲಯದ ಅಕಾಡಮಿಕ್ ಕೌನ್ಸಿಲ್ ಸದಸ್ಯರಾಗಿದ್ದಾರೆ. ಆದ್ದರಿಂದ ಅವರೇ ಅಲ್ಲಿ ಏನು ಈ ಅಭಿಪ್ರಾಯ ಬಂತು, ಈ ಬಗ್ಗೆ ಪ್ರಶ್ನೆ ಮಾಡಲಿ, ಹಾಗೂ ಸ್ವಲ್ಪ ಖಾರವಾಗಿ ಪ್ರಶ್ನೆ ಮಾಡತಕ್ಕದ್ದು ಒಳ್ಳೆಯದು ಎಂದು ನಾನು ಅವರಿಗೆ ಸೂಚನೆ ಹೇಳುತ್ತೇನೆ. ನಾನು ಈಗಾಗಲೇ ಹೇಳಿದ್ದೇನೆ ವಿರೋಧಪಕ್ಷದ ನಾಯಕರಿಗೆ ಹೇಳಿದಹಾಗೆ ಇದನ್ನ ನಿಲ್ಲಿಸುವುದಿಲ್ಲ. ಮತ್ತೆ ಏನು ಅನಾನುಕೂಲ ಇದೆ, ಅದನ್ನು ಸರಿಪಡಿಸಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.

ಶ್ರೀಮತಿ ಮೋಟಮ್ಮ:—ಅಧ್ಯಕ್ಷರೆ, ಎರಡೇ ಕೌನ್ಸಿಲ್ ಮೀಟಿಂಗ್ ಆಗಿರುವುದು, ನಾನು ಒಂದು ಮೀಟಿಂಗ್‌ಗೂ ಆಟೆಂಡ್ ಮಾಡಿಲ್ಲ, ಏಕೆಂದರೆ, ನಾನು ಹೋಗಲಿಕ್ಕೆ ಆಗಿಲ್ಲ, ಆದ್ದರಿಂದ, ಮಾನ್ಯ ಮಂತ್ರಿಗಳೇ ಇದರ ಬಗ್ಗೆ ಹೆಚ್ಚಿನ ಗಮನವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ನಮ್ಮ ಇಲಾಖೆಯ ಕಾರ್ಯದರ್ಶಿಗಳು ಈಗಾಗಲೇ ಆ ಉಪ-ಕುಲಪತಿಗಳ ಜೊತೆ ಮಾತನಾಡಿದ್ದಾರೆ. ಮತ್ತೆ ಮಕ್ಕಳನ್ನು ಸೇರಿಸುವುದಕ್ಕೆ ಆದೇಶ ಮುಂದುವರಿಯುತ್ತದೆ, ಅದರಂತೆ ಸೇರಿಸಿಕೊಳ್ಳುತ್ತಾರೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಸೂಕ್ತ ಕ್ರಮ ತೆಗೆದುಕೊಂಡಿರುವುದಕ್ಕಾಗಿ ತಮಗೆ ವಂದನೆಗಳು.

ನಿಯಮ ೩೩ಳಿರ ಮೇರೆಗೆ

೧) ಬಿಜಾಪುರ ಜಿಲ್ಲೆಯ ಸಾಕ್ಷರತೆಯ ಆಂದೋಳನ ಕಾರ್ಯಕ್ರಮಗಳು

SRI MANOHAR AINAPUR (Bilolli).—"Mass Literacy Campaign in Bijapur District" *i.e*, SAKSHARATA ANDOLAN For the year, 1990–91, in the entire State only two districts have been chosen for mass literacy campaign to make illiterate literates by liberating them through this movement. Bijapur district is one among them. An amount of Rs. 3 crore has already been released by the Government of India for this purpose. As per the survey illiteracy is more in poor class, backward class and scheduled castes and scheduled tribes. Therefore, involvement of these classes is very much essential for the movement in the district. But unfortunately it has been controlled and monopolised by one organisation that too only one family members even neglecting the District Level Adult Education and other important officers. A lot of mismanagement is being done. Therefore, Bijapur district general public are of the opinion that they are scared whether this programme reaches the mass poor class of the society. Therefore, will the Hon'ble Minister for Education instruct the competent authorities to change the organisation and entrust it to some other organisation?

SRI K.H. RANGANATH (Minister for Education).—I will take note of it.

(೨) ಕೊಪ್ಪಳ ತಾಲ್ಲೂಕಿನ ಹಿರೇ ಸಿಂಧಿಗನೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ವೈದ್ಯರನ್ನು ನೇಮಿಸುವ ಬಗ್ಗೆ

ಶ್ರೀ ಮಲ್ಲಿಕಾರ್ಜುನ ದಿಪಟರ್ (ಕೊಪ್ಪಳ).—ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿರುವ ಪ್ರಾಥಮಿಕ ಆರೋಗ್ಯಕೇಂದ್ರ ಹಿರೇಸಿಂಧಿಗನೂಲ್ಲಿ ಮಹಿಳಾ ವೈದ್ಯಾಧಿಕಾರಿ ಡಾ॥ ಸರೋಜಿನಿ ಇವರು ಮನಸ್ಸಾಸ್ಥ್ಯ ಕಳೆದುಕೊಂಡಿದ್ದು ಇವರಿಗೆ ಚಿಕಿತ್ಸೆಯ ಅವಶ್ಯಕತೆ ಇದೆ. ರೋಗಿಗಳ ಚಿಕಿತ್ಸೆ ಮಾಡುವ ಡಾಕ್ಟರಿಗೆ ಚಿಕಿತ್ಸೆಯ ಅವಶ್ಯಕತೆಯಿರುವಾಗ ಈ ಭಾಗದ ೩೦ ಹಳ್ಳಿಗಳ ಜನತೆಗೆ ಸುಮಾರು ೩ ವರ್ಷ ದಿಂದ ತುಂಬಾ ತೊಂದರೆಯಾಗಿದೆ ಇಷ್ಟೊಬ್ಬ ಪುರುಷ ವೈದ್ಯಾಧಿಕಾರಿ ಜಾಗಕ್ಕೆ ಎ.ಬಿ.ಬಿ.ಎಸ್. ಡಾಕ್ಟರನ್ನು ಹಾಕದೆ ಆರ್ಯುವೇದಿಕ್ ಡಾಕ್ಟರನ್ನು ಹಾಕಿದ್ದಾರೆ. ಇದರಿಂದ ಔಷಧ ವಿತರಣೆಗೆ ಮುನಿರಾಬಾದ್ ಡಾಕ್ಟರನ್ನು ನಿಯುಕ್ತಿಗೊಳಿಸಿದ್ದಾರೆ. ಅವರು ತಿಂಗಳಿಗೊಮ್ಮೆ ಬರುವುದರಿಂದ ಔಷಧಿಗಳು ಸರಿಯಾಗಿ ವಿತರಣೆಯಾಗದೆ ಅವ್ಯವಹಾರ ನಡೆದಿದೆ. ಈ ಅವ್ಯವಸ್ಥೆಯಿಂದ ಬೇಸತ್ತಿರುವ ಜನರಿಗೆ ಈ ದವಾಖಾನೆ ಇದ್ದರೂ ಅಷ್ಟೇ ಇಲ್ಲದಿದ್ದರೂ ಅಷ್ಟೇ ಎಂದು ರೋಸಿಹೋಗಿದ್ದಾರೆ ನಾನು ಸ್ವತಃ ಈ ಗಮನಕ್ಕೆ ದಿನಾಂಕ ೩-೭-೯೦ರಂದು ಭೇಟಿ ನೀಡಿದಾಗ ೧೫ ದಿನದಲ್ಲಿ ಈ ಅವ್ಯವಸ್ಥೆಯನ್ನು ಸರಿಪಡಿಸದಿದ್ದರೆದವಾಖಾನೆಗೆ ಬೀಗ ಮುದ್ರೆ ಹಾಕಲಾಂತೆ ಎಚ್ಚರಿಸಿದ್ದಾರೆ. ಬೇಗನೆ ಡಾಕ್ಟರನ್ನು ಒದಗಿಸುವ ಮೂಲಕ ಈ ಅವ್ಯವಸ್ಥೆಯನ್ನು ಸರಿಪಡಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವೆಯವರನ್ನು ವಿನಂತಿಸಿಕೊಳ್ಳುತ್ತೇನೆ. ಮತ್ತು ಈ ಮೊದಲು ಮಾನ್ಯ ಮಂತ್ರಿಗಳನ್ನು ಸಾಕಷ್ಟು ಸಲ